ಮಾಡಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ತೀರ್ಮಾನ ಮಾಡಬೇಕು.

(iv) ಸಿಂಸನ್ ಗ್ರೂಪ್‌ನ ಕೆಲಸಗಾರರ ಮುಷ್ಕರದ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಸಿಂಸನ್ ಗ್ರೂಪ್‌ನ ಕೆಲಸಗಾರರು ಕಳೆದ ಎರಡು ತಿಂಗಳಿಂದ ಮುಷ್ಕರ ಹೂಡಿದ್ದಾರೆ. ಬೆಂಗಳೂರು ಮತ್ತು ಮದ್ರಾಸ್ ನಗರದಲ್ಲಿಯೂ ಈ ಕಂಪನಿಯ ಕೆಲಸಗಾರರು ಮುಷ್ಕರ ಹೂಡಿದ್ದಾರೆ. ಸುಮಾರು 800 ಜನ ಮದ್ರಾಸ್ ರಾಜ್ಯದಲ್ಲಿಯೂ 400 ಜನ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ತಮ್ಮ ಬೇಡಿಕೆಗಳನ್ನು ಹಿಂದಿನ ವರ್ಷವೇ ಇಟ್ಟು ಚರ್ಚೆಯಾಗಿ ಅವು ಇತ್ಯರ್ಥವಾಗದೆ ಇದ್ದುದರಿಂದ ಎರಡು ತಿಂಗಳಿಂದ ಅವರು ಮುಷ್ಕರ ಹೂಡಿದ್ದಾರೆ. ಅವರು ಮುಷ್ಕರ ಹೂಡಿದ್ದರೂ ಸಹ ಪರಿಸ್ಥಿತಿ ಹತೋಟಿಗೆ ಬಂದಿಲ್ಲ, ಅವರ ಸಮಸ್ಯೆಗಳೂ ಸಹ ಇತ್ಯರ್ಥವಾಗಿಲ್ಲ. ಇಲ್ಲಿರುವ ವಿಶೇಷವಾದ ಪ್ರಶ್ನೆ ಎಂದರೆ, ಈ ಕೆಲಸಗಾರರಿಗೆ ಅವರು ಕೆಲಸ ಮಾಡಿದ ದಿವಸಗಳಿಗೂ ಸಹ ಸಂಬಳವನ್ನು ಕೊಟ್ಟಿಲ್ಲ. ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ನಾನು ಇದನ್ನು ಇಲ್ಲಿ ಪ್ರಸ್ತಾಪಮಾಡಬೇಕಾಗಿದೆ. ಈ ಕಂಪನಿಯವರು ಸಾಕಷ್ಟು ಲಾಭವನ್ನು ಮಾಡುತ್ತಿದ್ದು ಅವರು ತಯಾರಿಸಿದ ವಸ್ತುಗಳನ್ನು ವಿದೇಶಗಳಿಗೂ ಸಹ ಕಳುಹಿಸುತ್ತಿದ್ದಾರೆ. ಹೀಗಿರುವಾಗ ಅವರು ಕೆಲಸ ಮಾಡಿದ ಕೆಲಸಗಾರರಿಗೆ ಸಂಬಳವನ್ನು ಕೊಡದೇ ಹೋದರೆ ಅವರು ಜೀವನವನ್ನು ಹೇಗೆ ಮಾಡಬೇಕು ? ಅವರಿಗೆ ಕಾನೂನು ಪ್ರಕಾರ ಸಂಬಳವನ್ನು ಕೊಡಬೇಕು. ಸರ್ಕಾರದವರು ಕೂಡಲೇ ಅವರಿಗ ಸಂಬಳವನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಸ್ವಾಮಿ, ಈ ಕಂಪನಿಯ ಹೆಡ್ ಆಫೀಸ್ ತಮಿಳು ನಾಡಿನಲ್ಲಿದೆ. ಇವರ ಸಮಸ್ಯೆಗಳ ಬಗ್ಗೆ ಮಾತುಕತೆ ನಡೆದು ಕಾರ್ಮಿಕರಿಗೆ ಪರಿಹಾರ ದೊರೆಯದೇ ಇದ್ದುದರಿಂದ ಅವರು ಮುಷ್ಕರ ಹೂಡಬೇಕಾಯಿತು. ಇಲ್ಲಿ ಮುಖ್ಯವಾಗಿ ಬಂದಿರುವ ಸಮಸ್ಯೆ ಎಂದರೆ, ಅವರಿಗೆ ಈ ಕಂಪನಿಯವರು ಕಳೆದ ನವೆಂಬರ್ ತಿಂಗಳಿಂದ ಸಂಬಳವನ್ನು ಕೊಟ್ಟಿಲ್ಲ. ಮಾಲೀಕರು ಹೇರಳವಾಗಿ ಲಾಭ ಮಾಡುತ್ತಿದ್ದು ಕೆಲಸಗಾರರಿಗೆ ಕೆಲಸ ಮಾಡಿದ ದಿವಸಗಳಿಗೂ ಸಹ ಸಂಬಳವನ್ನು ಕೊಟ್ಟಿಲ್ಲ. ಸರ್ಕಾರದವರು ಅವರಿಗೆ ಸಂಬಳವನ್ನಾದರೂ ಕೊಡಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನೂ ಸಹ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿರುವುದರಿಂದ ನಾಳೆಯ ದಿವಸ ಇದಕ್ಕೆ ಉತ್ತರವನ್ನು ಕೊಡಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಮಿಕರ ಸಂಬಳಕ್ಕೆ ಏನು ಮಾಡಬೇಕು ?

ಅಧ್ಯಕ್ಷರು.—ಅವರಿಗೆ ಸಂಬಳ ಕೊಡಿಸುವುದನ್ನು ಇಲ್ಲಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

(v) ವಿ. ವಿ. ಪುರಂ ಕಾಲೇಜಿನ ಲೆಕ್ಚರರ್ ಜಯರಾಮ್ ಎಂಬವರ ನಾಪತ್ತೆ ಬಗ್ಗೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ವಿ.ವಿ. ಪುರಂ ಕಾಮರ್ಸ್ ಮತ್ತು ಆರ್ಟ್ಸ್ ಕಾಲೇಜಿಗೆ ಸಂಬಂಧಪಟ್ಟಂಥ ಮಾನ್ಯ ಜಯರಾಮ್, ಲೆಕ್ಚರರ್ ಇನ್ ಎಕೆನಾಮಿಕ್ಸ್ ಇವರು ದಿನಾಂಕ 13-1-83 ರಿಂದ ನಾಪತ್ತೆಯಾಗಿದ್ದಾರೆ. ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮಧ್ಯೆ ನಡೆದಂಥ ವಿಶೇಷವಾದಂಥ ಮುಷ್ಕರ, ಘರ್ಷಣೆಯ ಪರಿಣಾಮವಾಗಿ ಅವರು ನಾಪತ್ತೆಯಾಗಿದ್ದಾರೆ. ಅವರ ಹೆತ್ತವರು, ಹಾಗೂ ಅವರ ಅಣ್ಣ ಬಂದು ನಮ್ಮ ಜೊತೆಯಲ್ಲಿ ಮಾತನಾಡಿದ್ದಾರೆ. ಅಲ್ಲದೆ, ಅವರು ಪೋಲೀಸರಿಗೂ ಕೂಡ ಹೇಳಿದ್ದಾರೆ. ಇವರು ಪೋಲೀಸರಿಗೆ ದೂರು ಕೊಟ್ಟು ಸುಮಾರು ಎರಡು ತಿಂಗಳಾದರೂ ಕೂಡ ಅವರನ್ನು ಪತ್ತೆ ಮಾಡಿಲ್ಲ. ಅವರು ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು ಎಂದು ಸ್ಪಷ್ಟವಾಗಿ ದೂರು ಕೊಟ್ಟಿದ್ದರೂ ಸಹ ಅವರನ್ನು ಇನ್ನೂ ಪತ್ತೆ ಮಾಡಿಲ್ಲ. ಈ ಬಗ್ಗೆ ಪೋಲೀಸರು ತನಿಖೆ ಮಾಡಿಲ್ಲ. ನಿರ್ದಿಷ್ಟವಾಗಿ ದೂರು ಕೊಟ್ಟಿದ್ದರೂ ಸರ್ಕಾರ ಇದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ನಿಷ್ಕ್ರೀಯವಾಗಿ ನಿರಾಸಕ್ತಿಯಿಂದ ಇದೆ. ನಮಗೆ ಬಂದಂಥ ವರ್ತಮಾನದ ಪ್ರಕಾರ ಸರ್ಕಾರದ ಇಬ್ಬರು ಸಚಿವರುಗಳಾದ ಮಾನ್ಯ ದೇವೇಗೌಡರು ಮತ್ತು ಮಾನ್ಯ ಜೀವರಾಜ ಆಳ್ವ ಅವರ ಪ್ರವೇಶ ಇದರಲ್ಲಿ ಇದ್ದುದರಿಂದ ಇದು ನಡೆದಿದೆ.

ನಾಪತ್ತೆಯಾದಂಥ ಲೆಕ್ಚರರ್ ಅವರನ್ನು ಪತ್ತೆ ಹಚ್ಚುವ ಬಗ್ಗೆ ಸರ್ಕಾರ ಇದುವರೆವಿಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇಂಥವರನ್ನೇ ನಾಪತ್ತೆ ಮಾಡಿದರೆ ಇನ್ನು ಸಾಮಾನ್ಯ ಪ್ರಜೆಗಳ ಗತಿ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಮಾನ್ ಜಯರಾಂರವರು 13-11-83 ರಲ್ಲಿ ನಾಪತ್ತೆಯಾಗಿರುವುದು ನಿಜ. ಇದರ ಬಗ್ಗೆ ಅವರ ಸಹೋದರ ಶ್ರೀ ನಿಂಗೇಗೌಡರು 22-11-83ಕ್ಕೆ ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟರು. ಮತ್ತು ಈ ಸಂಬಂಧದಲ್ಲಿ ಒಂದು ಕೇಸನ್ನು ಕೂಡ

ರಿಜಿಸ್ಟರ್ ಮಾಡಿಕೊಳ್ಳಲಾಗಿದೆ. ಪತ್ತೆ ಮಾಡು ವಿಷಯದಲ್ಲಿ ಸಾಕಷ್ಟು ಪ್ರಯತ್ನ ನಡೆದಿದೆ. ಪತ್ರಿಕೆಗಳಲ್ಲಿಯೂ ಕೂಡ ಈ ವಿಚಾರವನ್ನು ಪ್ರಚಾರ ಮಾಡಿದ್ದೇವೆ. ಅಲ್ಲದೆ ಜಯರಾಂರವರ ಫೋಟೋವನ್ನೂ ಕೂಡ ಎಲ್ಲಾ ಪೋಲೀಸ್ ಠಾಣೆಗಳಿಗೂ ಕಳುಹಿಸಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ, ಚಿಕ್ಕಮಗಳೂರು, ಹುಬ್ಬಳ್ಳಿ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಶೋಧ ನಡೆದಿದೆ. ಇವತ್ತಿನವರೆವಿಗೂ ಅವರು ಸಿಕ್ಕಿಲ್ಲ. ಈ ಮಧ್ಯದಲ್ಲಿ ಏನಾಗಿದೆ ಅಂದರೆ ಅದೇ ಸಂಜೆ ಕಾಲೇಜಿನಲ್ಲಿ ಕೆಲಸ ಮಾಡುವಂಥ ಶ್ರೀ ಸಿದ್ದೇಗೌಡರು ಇವರ ಮಿತ್ರರು. ನಾನು ಈ ಸಾರಿ ಸೆನೇಟ್‌ಗೆ ನಿಲ್ಲುತ್ತೇನೆ, ತಾವು ನನಗೆ ಸಹಾಯ ಮಾಡಬೇಕೆಂದು ಕೇಳಿದ್ದಾರೆ. ಜಯರಾಂರವರು ಅವರಿಗೆ ಸಹಾಯ ಮಾಡದೇ ಬೇರೆಯವರಿಗೆ ಮಾಡಿದ್ದರಿಂದ ಇವರಿಬ್ಬರ ಮಧ್ಯದಲ್ಲಿ ತಿಕ್ಕಾಟ ಆಗಿತ್ತು. ಅಷ್ಟೇ ಹೊರತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದರಲ್ಲಿ ಶ್ರೀಮಾನ್ ದೇವೇಗೌಡ ವರ್ಸಸ್ ಡಾ. ಜೀವರಾಜ್ ಆಳ್ವ ಅವರ ಕೈವಾಡವೇನೂ ಇಲ್ಲ.

ಶ್ರೀ ಜಿ. ನಾರಾಯಣ ಕುಮಾರ್.— ನಾಪತ್ತೆಯಾಗಿರುವಂಥ ಜಯರಾಂರವರು ಇವರಿಬ್ಬರಲ್ಲಿ ಯಾರ ಕಡೆಯವರು ?

ಶ್ರೀ ಎಂ. ವೀರಪ್ಪ ಮೊಯ್ಲಿ —ಅಪಹರಿಸಿದವರು ಜೀವರಾಜ್ ಆಳ್ವ ಅವರ ಕಡೆಯವರು.

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀ ದೇವೇಗೌಡರದಾಗಲೀ, ಶ್ರೀ ಜೀವರಾಜ ಆಳ್ವ ಅವರದಾಗಲೀ ಇದರಲ್ಲಿ ಯಾವ ರೀತಿಯ ಸಂಬಂಧವೂ ಇಲ್ಲ. ಮೊನ್ನೆ ತಾರೀಖು 9-1-84ರಲ್ಲಿ ಶ್ರೀ ಮಾನ್ ನಿಂಗೇಗೌಡರು ಇದರಲ್ಲಿ ಶ್ರೀ ಸಿದ್ದೇಗೌಡ ಮತ್ತು ಶ್ರೀ ಸೋಮೇಗೌಡರ ಹಸ್ತಕ್ಷೇಪ ಇರಬಹುದೆಂದು ದೂರು ಕೊಟ್ಟಿದ್ದಾರೆ. ಇಲ್ಲಿಯವರೆಗೆ ನಡೆದಂಥ ತನಿಖೆ ಪ್ರಕಾರ ಯಾವುದೇ ಸಂದೇಹಕ್ಕೆ ಆಧಾರವಿಲ್ಲವೆಂದು ಗೊತ್ತಾಗಿದೆ. ಇನ್ನೂ ಶೋಧನೆ ನಡೆಯುತ್ತಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು.—ಮತ್ತೆ ಏಕೆ ?

ಶ್ರೀ. ಎಂ. ವೀರಪ್ಪ ಮೊಯ್ಲಿ.—ಈ ಬಗ್ಗೆ ಕ್ಲಾರಿಫೀಷನ್ ಕೇಳಬೇಕಾಗುತ್ತದೆ.

ಅಧ್ಯಕ್ಷರು.—ಕ್ಲಾರಿಫಿಕೇಷನ್‌ಗೆ ಅವಕಾಶ ಇಲ್ಲ. ನೀವೇ ಹೀಗೆ ಮಾಡಿದರೆ ಹೇಗೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಬಹಳ ಗಂಭೀರವಾದಂಥ ವಿಷಯ.

ಅಧ್ಯಕ್ಷರು.—ಎಲ್ಲವೂ ಗಂಭೀರವಾದಂಥ ವಿಷಯಗಳೇ ಆಗಿವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಇದು ಬಹಳ ಮಹತ್ವದ ವಿಚಾರ ಎರಡು ವಿದ್ಯಾರ್ಥಿಗಳ ಗುಂಪಿನಲ್ಲಿ ಘರ್ಷಣೆ ನಡೆದಿದೆ. ವಿದ್ಯಾರ್ಥಿಗಳೂ ಸಹ ಅಪಹರಿಸಿದ್ದಾರೆನ್ನುವ ಸುದ್ದಿ ಇದೆ.

Mr. Speaker.—May I request you kindly co-operate with me so that other Hon. Members also get a chance to bring to the notice of the Government some important matters.

Sri M. Veerappa Moily.— I am just bringing to the notice of the Government regarding kidnaping of a lecturer. Nobody knows about his whereabouts. ಇದು ಒಬ್ಬ ತರುಣನ ಜೀವನಕ್ಕೆ ಸಂಬಂಧಪಟ್ಟ ವಿಚಾರ. ಈ ವಿಚಾರದಲ್ಲಿ ತಾವು ಅನುಕಂಪ ತೋರಿಸಬೇಕಾಗುತ್ತದೆ

ಅಧ್ಯಕ್ಷರು.— ರಾಜ್ಯಪಾಲರ ಭಾಷಣದ ಮೇಲೆ ತಾವು ಮಾತನಾಡುವಾಗ ಈ ಎಲ್ಲಾ ವಿಷಯಗಳನ್ನೂ ಹೇಳಬಹುದು.

ಶ್ರೀ ರಾಮಕೃಷ್ಣ ಹೆಗ್ಗಡೆ.— ಸ್ವಾಮಿ, ತಾರೀಖು 22-11-83ರ ವರೆಗೂ ಇವರು ನಾಪತ್ತೆ ಆಗಿರುವ ಬಗ್ಗೆ ದೂರು ಬಂದಿಲ್ಲ. ಆದ್ದರಿಂದ ಕಿಡ್‌ನ್ಯಾಪ್ ಆಗಿರುವಂಥ ಪ್ರಶ್ನೆ ಎಲ್ಲಿ ಬಂತು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇನ್‌ವೆಸ್ಟಿಗೇಷನ್ ಮಾಡಿಲ್ಲ.

(vi) ಶಿಕ್ಷಕರ ನೇಮಕಾತಿ ಸಂದರ್ಶನವನ್ನು ಮುಂದೂಡುವ ಮತ್ತು ಅಲ್ಲಿ ನಡೆದಿರುವ ಲಂಚದ ಬಗ್ಗೆ.

ಶ್ರೀ ಜಿ. ಎಸ್. ಬಸವರಾಜು.— ಸ್ವಾಮಿ, ಹಾಸನ ಜಿಲ್ಲಾ ಶಿಕ್ಷಕರ ನೇಮಕಾತಿ ಸಮಿತಿಯು ದಿನಾಂಕ 2-2-84ರಂದು ಶಿಕ್ಷಕರ ಸಂದರ್ಶನ ಇಟ್ಟುಕೊಂಡಿದೆ. ಆದರೆ ಜಿಲ್ಲಾದ್ಯಂಥ ರಸ್ತೆ ಮತ್ತು ರೈಲು ತಡೆ ಚಳುವಳಿ ನಡೆಯುತ್ತಿರುವುದರಿಂದ ಜನಜೀವನ ಅಸ್ತವ್ಯಸ್ತಗೊಂಡಿರುವುದನ್ನು ಕಾಣುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಶಿಕ್ಷಕರ ಸಂದರ್ಶನಕ್ಕೆ ಅಭ್ಯರ್ಥಿಗಳು ಹೋಗುವುದಕ್ಕೆ ಕಷ್ಟವಾಗಿರುವುದರಿಂದ, ದಯಮಾಡಿ ಸಂದರ್ಶನವನ್ನು ಮುಂದಕ್ಕೆ ಹಾಕಬೇಕೆಂದು ಸರ್ಕಾರದ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಈಗ ವಿದ್ಯಾ ಮಂತ್ರಿಗಳು ಇಲ್ಲ, ಅವರ ಗಮನಕ್ಕೆ ಇದನ್ನು ತರಲಾಗುವುದು.

ಶ್ರೀ ಎಂ. ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಜಿಲ್ಲಾ ಶಿಕ್ಷಕರ ನೇಮಕಾತಿ ಸಮಿತಿಯಲ್ಲಿ ಒಬ್ಬೊಬ್ಬ ಅಭ್ಯರ್ಥಿಯಿಂದ ಸುಮಾರು 10–15 ಸಾವಿರ ರೂಪಾಯಿಗಳ ಲಂಚ ಪಡೆಯುತ್ತಿದ್ದಾರೆಂದು ದೂರುಗಳು ನಮಗೆ ಬಂದಿವೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಭ್ರಷ್ಟಾಚಾರ ತೆಗೆಯುತ್ತೇವೆಂದು ಹೇಳುತ್ತಿರುತ್ತಾರೆ. ಆದ್ದರಿಂದ ಯಾವ ಯಾವ ಸಮಿತಿಗಳ ಇಂಥ ದೂರುಗಳು ಬರುತ್ತವೆ,